ಸಾಕ್ಷಿಯನ್ನು ದಿಃ 16-06-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ. ಎಸ್ ಎಫ್ ಡಿ ವಕೀಲರಿಂದ (ಪ್ರತಿವಾದಿ ನಂ.1 ರಿಂದ 3 ಹಾಗೂ 5 ರಿಂದ 7 ರ ಪರವಾಗಿ)**

ಮೂಲ ಪುರುಷ ಬಸಪ್ಪ ನಮ್ಮ ಹೆಣ್ಣಜ್ಜ. ಸದರಿ ಬಸಪ್ಪನಿಗೆ ಭೀಮಪ್ಪ ಎಂಬ ಸಹೋದರನಿದ್ದ ಎಂದರೆ ಸರಿ. ಸದರಿ ಭೀಮಪ್ಪನ ಮಗ ಬಾಲಪ್ಪ ಎಂದರೆ ಸರಿ. ಸದರಿ ಬಸಪ್ಪ ಹಾಗೂ ಭೀಮಪ್ಪ ಇವರಿಗೆ ರಡ್ಡೇರನಾಗನೂರ ಗ್ರಾಮದ ಸರ್ವೇ ನಂ.12/2 ಕ್ಷೇತ್ರ 4 ಎಕರೆ 15 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಅವರಿಗೆ ಅದೇ ಗ್ರಾಮದಲ್ಲಿ ವ್ಹಿ.ಪಿ.ಸಿ ನಂ.213, 200, 213 ಮತ್ತು 225 ಮನೆಗಳಿವೆ ಎಂದರೆ ಸರಿ. ಸದರಿ ಮನೆಗಳನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.  ಸದರಿ ಜಮೀನು ಹಾಗೂ ಮನೆ ಪ್ರಮಾಣ ಪತ್ರಗಳನ್ನು ಸಾಕ್ಷಿ ನೋಡಿ ಒಪ್ಪಿಕೊಂಡ ಮೇರೆಗೆ ಅವುಗಳನ್ನು ನಿಡಿಃ1 ರಿಂದ 5 ಎಂದು ಗುರುತಿಸಿದೆ. ಸದರಿ ಜಮೀನು ಹಾಗೂ ಮನೆಗಳು ಮಾತ್ರ ಬಸಪ್ಪನಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ.

ಬಸಪ್ಪನ ಹೆಂಡತಿ ಫಕ್ಕೀರವ್ವ ನಮ್ಮ ಹೆಣ್ಣಜ್ಜಿ ಎಂದರೆ ಸರಿ. ಸದರಿ ಬಸಪ್ಪ ಮತ್ತು ಫಕ್ಕೀರವ್ವನಿಗೆ ನಮ್ಮ ತಾಯಿ ಸೇರಿದಂತೆ ಮೂರು ಜನ ಹೆಣ್ಣುಮಕ್ಕಳು ಹಾಗೂ ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ನಮ್ಮ ತಂದೆ ಹಾಗೂ ನನ್ನ ಸಹೋದರ ರಾಮಪ್ಪ ತೀರಿಕೊಂಡಿರುವುದರಿಂದ ನನ್ನ ತಾಯಿ ಯಲ್ಲವ್ವನಿಗೆ ನಾನೊಬ್ಬನೇ ವಾರಸುದಾರ ಎಂದರೆ ಸರಿ. ಪ್ರತಿವಾದಿ ನಂ.5 ಮತ್ತು 6 ನಮ್ಮ ಚಿಕ್ಕಮ್ಮ ರೇಣವ್ವಳನ ವಾರಸುದಾರರು ಎಂದರೆ ಸರಿ. ಪ್ರತಿವಾದಿ ನಂ.7 ಪ್ರತಿವಾದಿ ನಂ.1 ರ ಮಗ ಎಂದರೆ ಸರಿ.

ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಲ್ಲ ಎಂದರೆ ಸರಿ. ದಾವಾ ಆಸ್ತಿ ಸರ್ವೇ ನಂ.74/1 ಹಾಗೂ 125 ಮೂಲತಃ ಚನ್ನಬಸವ್ವ ಸಂಗನಗೌಡ ಸುಳ್ಳದ ಇವರಿಗೆ ಸೇರಿದ್ದವು ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ವಿಚಾರವಾಗಿ  ಚನ್ನಬಸವ್ವ ಸಂಗನಗೌಡ ಸುಳ್ಳದ ಹಾಗೂ 1 ನೇ ಪ್ರತಿವಾದಿಯ ಮಧ್ಯೆ ಮಾಲ್ಕೀ ಹಕ್ಕಿನ ವಿಚಾರವಾಗಿ ಭೂ ನ್ಯಾಯಮಂಡಳಿಯಲ್ಲಿ ಪ್ರಕರಣ ನಡೆದಿತ್ತು ಎಂದರೆ ಗೊತ್ತಿಲ್ಲ. ಸದರಿ ದಾವೆ 1978 ರಿಂದ

1982 ರವರೆಗೆ ನಡೆದಿತ್ತು ಎಂದರೆ ಗೊತ್ತಿಲ್ಲ. ವಿಚಾರನೆ ನಡೆಸಿದ ಭೂ ನ್ಯಾಯಮಂಡಳಿ ಪ್ರತಿವಾದಿ ನಂ.1 ಭೀಮಪ್ಪನಿಗೆ ಅಧಿಭೋಗಧಾರಿಕೆ ಹಕ್ಕು ಮಂಜೂರು ಮಾಡಿತು ಎಂದರೆ ಗೊತ್ತಿಲ್ಲ. ಆ ಬಗ್ಗೆ ಡ ನಂ.1862 ರ ಪ್ರಕಾರ 1 ನೇ ಪ್ರತಿವಾದಿಯ ಹೆಸರು ದಾಖಲಾಯಿತು ಎಂದರೆ ಗೊತ್ತಿಲ್ಲ. ಅಂದಿನಿಂದ ಇಂದಿನವರೆಗೆ ಪ್ರತಿವಾದಿ ನಂ.1 ಸದರಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿ. ನಂತರ ಭೀಮಪ್ಪನ ಮಕ್ಕಳು ಸದರಿ ಆಸ್ತಿಯಲ್ಲಿ ಪಾಲು ಕೇಳಿ ದಾವೆ ಹೂಡಿದ್ದರು ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಭೀಮಪ್ಪ ಮಾತ್ರ ಸದರಿ ಆಸ್ತಿಯ ಮಾಲೀಕ ಎಂದು ತೀರ್ಮಾನ ಆಗಿದೆ ಎಂದರೆ ಸರಿ. ನಂತರ ಪ್ರತಿವಾದಿ ನಂ.1 ಸದರಿ ಆಸ್ತಿಯನ್ನು ತನ್ನ ಮಗನಾದ 7 ನೇ ಪ್ರತಿವಾದಿಯ ಹೆಸರಿಗೆ ದಾನ ಪತ್ರದ ಮೂಲಕ ಬಿಟ್ಟು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಸಧ್ಯಕ್ಕೆ ಸದರಿ ಆಸ್ತಿ ಪ್ರತಿವಾದಿ ನಂ. 7 ರ ಹೆಸರಿನಲ್ಲಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ಗೊತ್ತಿಲ್ಲದೇ ಆ ರೀತಿ ದಾಖಲೆ ಸೃಷ್ಠಿಮಾಡಿದ್ದಾರೆ ಎಂದು ಹೇಳುತ್ತಾರೆ. ದಾಖಲೆ ಸೃಷ್ಠಿಮಾಡಿದ್ದಾರೆ ಎಂದು ನಾನು ಯಾವುದೇ ದೂರು ದಾಖಲಿಸಿಲ್ಲ. ದಾವಾ ಆಸ್ತಿಗಳ ಚಕಬಂದಿ ಗೊತ್ತಿಲ್ಲ.

ಪಿತ್ರಾರ್ಜಿತ ಆಸ್ತಿಗಳಿಗೆ ವಾರಸಾ ಮಾಡಿಕೊಳ್ಳುವ ಸಮಯದಲ್ಲಿ ದಾವಾ ಆಸ್ತಿಗಳಿಗೂ ಸಹ ನನ್ನ ಹಾಗೂ ಪ್ರತಿವಾದಿ ನಂ.2 ರಿಂದ 6 ರವರ ಹೆಸರು ಜಂಟಿಯಾಗಿ ದಾಖಲಾಗಿವೆ ಎಂದರೆ ಸರಿ. ನಮ್ಮ ಹೆಸರು ತಪ್ಪಾಗಿ ದಾಖಲಾಗಿದೆ ಎಂದು 1 ನೇ ಪ್ರತಿವಾದಿ ವಿಚಾರಿಸಿದ್ದಾನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ದಾವಾ ಆಸ್ತಿಯಿಂದ ನನ್ನ ಹೆಸರು ಕಡಿಮೆ ಮಾಡಲು ನಾನು ಒಪ್ಪಿಗೆ ಸೂಚಿಸಿದ್ದೆ ಎಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿ ನಂ.4 ಸೇರಿ 2 ನೇ ಪ್ರತಿವಾದಿ ಹೆಸರಿಗೆ ಮುಕ್ತಿಯಾರ ಪತ್ರ ಬರೆದುಕೊಟ್ಟಿದ್ದೇವು ಎಂದರೆ ಸರಿಯಲ್ಲ. ಸದರಿ ಮುಕ್ತಿಯಾರ ಪತ್ರದ ಆಧಾರದಲ್ಲಿ ಪ್ರತಿವಾದಿಯರು ವಾಟ್ನಿ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ವಾಟ್ನಿ ಕಾಲಕ್ಕೆ ಪ್ರತಿವಾದಿ ನಂ.1 ನನಗೆ ರೂ.2 ಲಕ್ಷ ಹಣ ನೀಡಿದ್ದಾರೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪತ್ರ ನೋಂದಣಿಯಾಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಪ್ರತಿವಾದಿ ನಂ.1 ಮಾತ್ರ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಉತಾರೆಯಲ್ಲಿ ನಮ್ಮ ತಾಯಿಯ ಹೆಸರು ದಾಖಲಾಗಿದ್ದ ಬಗ್ಗೆ ದಾಖಲೆ ಹಾಜರಪಡಿಸಿಲ್ಲ.

ದಾವಾ ಆಸ್ತಿ ವಿಚಾರವಾಗಿ ಪ್ರತಿವಾದಿ ನಂ.4 ಹಾಗೂ ನಮ್ಮ ವಿರುದ್ಧ ದಾವೆ ನಡೆದಿತ್ತು ಎಂದರೆ ಸರಿಯಲ್ಲ. ಪ್ರತಿವಾದಿ ನಂ.4 ಪ್ರತಿವಾದಿ ನಂ.1 ಮತ್ತು 2 ರ ವಿರುದ್ಧ ನರಗುಂದ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದ ಎಂದರೆ ಸರಿ. ಸದರಿ ಸಿಸಿ ನಂ.518/2019 ರಲ್ಲಿ ನಾನು ಸಾಕ್ಷಿ ನುಡಿದಿದ್ದೇನೆ ಎಂದರೆ ಕ್ರಿಮಿನಲ್ ಕೇಸ ಮುಗಿಸುವ ಸಲುವಾಗಿ ನನ್ನ ಸಾಕ್ಷಿ ಪಡೆಯಲಾಗಿದೆ ಎಂದು ಹೇಳುತ್ತಾರೆ. ಆ ಕೇಸಿನಲ್ಲಿ ಸಾಕ್ಷಿ ನುಡಿಯುವಾಗ ಪ್ರತಿವಾದಿ ನಂ.2 ರವರಿಗೆ ಒಟ್ಟು ಮುಕ್ತಿಯಾರ ಪತ್ರ ಬರೆದುಕೊಟ್ಟಿದ್ದನ್ನು ಮತ್ತು ಆ ನಂತರ ಆದ ವಾಟ್ನಿಯನ್ನು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಪಾಲು ಕೊಡುವಂತೆ ನಾನು ಪ್ರತಿವಾದಿಯರನ್ನು ಕೇಳಿದ ದಿನಾಂಕ ಗೊತ್ತಿಲ್ಲ. ನಾನು ಪಾಲು ಕೇಳುವಾಗ ಹಿರಿಯರು ಇರಲಿಲ್ಲ. ನಾನು ಪಾಲು ಕೇಳಿದ್ದೆ ಮತ್ತು ಪ್ರತಿವಾದಿ ಇನ್ಕಾರ ಮಾಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇರದೇ ಇದ್ದರೂ ಸಹ ಪ್ರತಿವಾದಿ ನಂ.1 ರಿಂದ 3 ಮತ್ತು 5 ರಿಂದ 7 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ವಿನಂತಿ ಮೇರೆಗೆ ಪ್ರತಿವಾದಿ ನಂ.4 ರ ಪರವಾಗಿ ಪಾಟೀ ಸವಾಲಿಗೆ ಮುಂದೂಡಿದೆ)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.